# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 780
ಸದಸ್ಯರ ಹೆಸರು : ಶ್ರೀ ಐವನ್ ಡಿ' ಸೋಜಾ
(ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 13.03.2025
ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮಂಗಳೂರು ನಗರ ವ್ಯಾಪ್ತಿಯಲ್ಲಿ ಟ್ರಾಫಿಕ್ ವ್ಯವಸ್ಥೆಯಲ್ಲಿ ತುಂಬಾ ದೂರುಗಳಿದ್ದು, ಅವ್ಯವಸ್ಥೆಗಳಿಂದ ಕೂಡಿದ್ದು, ಇದನ್ನು ಸರಿಪಡಿಸಲು ಕೈಗೊಂಡಿರುವ ಕ್ರಮಗಳೇನು; ಮತ್ತು ಯೋಜನೆಗಳು ಯಾವುವು;(ವಿವರ ನೀಡುವುದು) | 1. ಸಾರ್ವಜನಿಕರಿಂದ ಸಂಚಾರ ಅವ್ಯವಸ್ಥೆ ಬಗ್ಗೆ ಯಾವುದೇ ದೂರುಗಳು ಬಂದಿರುವುದಿಲ್ಲ. ಕೆಲವು ಬಾರಿ ಮಾತ್ರ ಪೀಕ್ ಹವರ್‌ನಲ್ಲಿ ಅಥವಾ ರಸ್ತೆ, ಚರಂಡಿ, ಸೇತುವೆ ಕಾಮಗಾರಿಗಳಿಂದ ವಾಹನ ಸಂಚಾರ ನಿಧಾನಗತಿಯಾದಾಗ, ಸಾರ್ವಜನಿಕರಿಂದ ಕೆಲವು ಕರೆಗಳು ಸ್ವೀಕೃತವಾಗುತ್ತಿದ್ದು, ಈ ಸಮಯದಲ್ಲಿ ತಕ್ಷಣ ಸ್ಪಂದಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿರುತ್ತದೆ.<br>2. ಸಾರ್ವಜನಿಕರಿಂದ ಮಂಗಳೂರು ನಗರದೊಳಗೆ ಸಂಚಾರ ದಟ್ಟಣೆ, ಅಪಘಾತ ಮತ್ತು ಸಂಚಾರ ಸಂಬಂಧಿತ ದೂರುಗಳು ಬಂದಲ್ಲಿ ಇವುಗಳನ್ನು ನಿರ್ವಹಿಸಲು 01 ಚೀತಾ ಹಾಗೂ 04 ಕೋಬ್ರಾ ವಾಹನಗಳನ್ನು ನಿಯೋಜಿಸಿ, ಕ್ರಮ ಕೈಗೊಳ್ಳಲಾಗುತ್ತಿರುತ್ತದೆ. ಅಲ್ಲದೇ ಪ್ರಮುಖ ಜಂಕ್ಷನ್‌ಗಳಲ್ಲಿ ಸಂಚಾರ ನಿರ್ವಹಣೆ ಮಾಡಲು ಪಿಎಸ್‌ಐ ಹಾಗೂ ಎಎಸ್‌ಐ ಮಟ್ಟದ ಅಧಿಕಾರಿಗಳನ್ನು ನಿಯೋಜಿಸಲಾಗುತ್ತಿರುತ್ತದೆ.<br>3. ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚಾರಕ್ಕೆ ಸಂಬಂಧಿಸಿದಂತೆ ಸಮಸ್ಯೆ/ದೂರು /ಅಪಘಾತದ ಬಗ್ಗೆ ಮಾಹಿತಿ ದೊರೆತ ತಕ್ಷಣ ಸ್ಥಳಕ್ಕೆ ತೆರಳಲು ಅನುವಾಗುವಂತೆ 07 ಸಂಖ್ಯೆಯ ಹೈವೇ ಪ್ಯಾಟ್ರೋಲಿಂಗ್ ವಾಹನಗಳನ್ನು ಕರ್ತವ್ಯಕ್ಕೆ ನಿಯೋಜಿಸಿ ಕ್ರಮ ಕೈಗೊಳ್ಳಲಾಗುತ್ತಿರುತ್ತದೆ.<br>4. ಮಂಗಳೂರು ನಗರದ ಹ್ಯಾಮಿಲ್ಟನ್ ಹಾಗೂ ಅಂಬೇಡ್ಕರ್ ಜಂಕ್ಷನ್ ಅಭಿವೃದ್ಧಿ ಬಗ್ಗೆ ಮಂಗಳೂರು ನಗರ ಸಂಚಾರಿ ಪೊಲೀಸ್ ವತಿಯಿಂದ ಮಹಾನಗರ ಪಾಲಿಕೆಗೆ ಪ್ರಸ್ತಾವನೆ ಮತ್ತು ಸಲಹೆಯ ವರದಿಯನ್ನು ನೀಡಿದ್ದು, ಈಗಾಗಲೇ ಜಂಟಿ ಪರಿವೀಕ್ಷಣೆ ಕೈಗೊಂಡಿದ್ದು, ಸಂಚಾರಿ ಸರ್ವೆ ಕಾರ್ಯವನ್ನು ಮುಗಿಸಿ ಎನ್‌ಐಟಿಕೆ(National Institute of Technology Karnataka) ತಂತ್ರಜ್ಞರಿಗೆ ಒದಗಿಸಿದ್ದು, ಅವರಿಂದ ಅಧ್ಯಯನ ವರದಿ ಬಂದ ಕೂಡಲೇ ಎಂಸಿಸಿ(ಮಂಗಳೂರು ಸಿಟಿ ಕಾರ್ಪೊರೇಷನ್) ವತಿಯಿಂದ ಕ್ರಮ ಕೈಗೊಳ್ಳಲಾಗುತ್ತದೆ. |
| ಆ) | ಮಂಗಳೂರು ನಗರ ಪೊಲೀಸ್ ವಾಪ್ತಿಯಲ್ಲಿ 2022-23, 2023-24 ಮತ್ತು 2024-25ರಲ್ಲಿ ಉಂಟಾಗಿರುವ ವಾಹನ ಅಪಘಾತ ಕೇಸುಗಳು ಹಾಗೂ | ಮಂಗಳೂರು ನಗರ ಮತ್ತು ಸಂಚಾರ ಠಾಣೆಗಳಲ್ಲಿ 2022-23, 2023-24 ಮತ್ತು 2024-25ರಲ್ಲಿ ಉಂಟಾಗಿರುವ ವಾಹನ ಅಪಘಾತ ಪ್ರಕರಣಗಳು ಹಾಗೂ |

| | | |
|---|---|---|
| | ಮರಣ ಹೊಂದಿದ ಪ್ರಕರಣಗಳ ಸಂಖ್ಯೆ ಎಷ್ಟು; ಸಂಚಾರಿ ಠಾಣೆಗಳಲ್ಲಿ ದಾಖಲಾದ ಪ್ರಕರಣಗಳೆಷ್ಟು; (ವಿವರ ನೀಡುವುದು) | ಅಪಘಾತದಲ್ಲಿ ಮರಣ ಹೊಂದಿದ ಪ್ರಕರಣಗಳ ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಿದೆ. |
| ಇ) | ನಗರ ವ್ಯಾಪ್ತಿಯಲ್ಲಿ ಈಗಿರುವ ಸಂಚಾರಿ ಪೊಲೀಸ್ ಠಾಣೆಗಳಲ್ಲಿ ಹೆಚ್ಚು ಪ್ರಕರಣ ದಾಖಲಾಗುತ್ತಿರುವ ಕಾರಣ ಹೆಚ್ಚುವರಿ ಟ್ರಾಫಿಕ್ ಪೊಲೀಸ್ ಠಾಣೆಗಳನ್ನು ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆಯೇ;(ಈ ಬಗ್ಗೆ ವಿವರ ನೀಡುವುದು) | ಮಂಗಳೂರು ನಗರದಲ್ಲಿ ಪ್ರಸ್ತುತ ಸಂಚಾರ ಪೂರ್ವ, ಸಂಚಾರ ಪಶ್ಚಿಮ, ಸಂಚಾರ ಉತ್ತರ ಹಾಗೂ ಸಂಚಾರ ದಕ್ಷಿಣ ಸೇರಿ ಒಟ್ಟು 04 ಸಂಚಾರ ಪೊಲೀಸ್ ಠಾಣೆಗಳು ಕಾರ್ಯನಿರ್ವಹಿಸುತ್ತಿರುತ್ತವೆ. ರಾಷ್ಟ್ರೀಯ ಪೊಲೀಸ್ ಆಯೋಗದ ಶಿಫಾರಸ್ಸಿನಂತೆ ಹೊರಡಿಸಲಾದ, ಡಿಜಿ & ಐಜಿಪಿಯವರ ಕಛೇರಿ ಸುತ್ತೋಲೆ ಸಂಖ್ಯೆ: ಆರ್.ಎಲ್.ಎನ್(5)2/2017–18, ದಿನಾಂಕ:28.12.2017 ರನ್ವಯ ಹೊಸ ಸಂಚಾರ ಪೊಲೀಸ್ ಠಾಣೆ ಸೃಜಿಸಲು ವಾರ್ಷಿಕ ಸರಾಸರಿ 150–250 ಅಪಘಾತ ಪ್ರಕರಣಗಳು ದಾಖಲಾಗಬೇಕಾಗಿರುತ್ತದೆ. ಈ ಮಾನದಂಡಗಳನ್ನು ಪೂರೈಸಿಲ್ಲವಾದ್ದರಿಂದ ಮಂಗಳೂರು ನಗರ ವ್ಯಾಪ್ತಿಯಲ್ಲಿ ಹೆಚ್ಚುವರಿ ಸಂಚಾರ ಪೊಲೀಸ್ ಠಾಣೆಗಳನ್ನು ನಿರ್ಮಾಣ ಮಾಡಲು ಸಾಧ್ಯವಿರುವುದಿಲ್ಲ. |
| ಈ) | ನಗರ ಟ್ರಾಫಿಕ್ ವ್ಯವಸ್ಥೆಯನ್ನು ಸರಿದೂಗಿಸಲು ಮತ್ತು ನಿಯಂತ್ರಿಸಲು ಸರ್ಕಾರದ ಮುಂದಿರುವ ಸಲಹೆಗಳು ಯಾವುವು ? (ವಿವರ ನೀಡುವುದು) | ❖ ವಾಹನಗಳ ಸುಗಮ ಸಂಚಾರಕ್ಕಾಗಿ ಮಹಾನಗರ ಪಾಲಿಕೆ, ಲೋಕೋಪಯೋಗಿ ಇಲಾಖೆ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಗಳ ಸಮನ್ವಯದೊಂದಿಗೆ ಕಾಲ ಕಾಲಕ್ಕೆ ಅಗತ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡು ನಿರ್ವಹಣೆ ಮಾಡಲಾಗುತ್ತಿರುತ್ತದೆ.<br>❖ ದಿನದಿಂದ ದಿನಕ್ಕೆ ರಸ್ತೆಯಲ್ಲಿ ವಾಹನಗಳ ಸಂಖ್ಯೆ ಹೆಚ್ಚಾಗುತ್ತಲೇ ಇರುವುದರಿಂದ ವಾಹನ ದಟ್ಟಣೆ ಇರುವ ರಸ್ತೆಗಳಲ್ಲಿ ರಸ್ತೆಗಳ ಅಗಲೀಕರಣ ಹಾಗೂ ಫ್ಲೈಓವರ್‌ಗಳನ್ನು ನಿರ್ಮಿಸುವ ಅಗತ್ಯತೆ ಇರುತ್ತದೆ.<br>❖ ಪ್ರಮುಖವಾಗಿ ರಾಷ್ಟ್ರೀಯ ಹೆದ್ದಾರಿ 66ರಲ್ಲಿ ಕೆಪಿಟಿ ಜಂಕ್ಷನ್ ಹಾಗೂ ನಂತೂರು ಜಂಕ್ಷನ್‌ನಲ್ಲಿ ಫ್ಲೈ ಓವರ್, ರಸ್ತೆ ಅಗಲೀಕರಣ ಹಾಗೂ ಇತರೇ ಅಭಿವೃದ್ಧಿ ಕಾಮಗಾರಿಗಳನ್ನು ಸಂಬಂಧಪಟ್ಟ ಪ್ರಾಧಿಕಾರದಿಂದ ಕೈಗೊಳ್ಳಬೇಕಾಗಿರುತ್ತದೆ.<br>❖ ಅಲ್ಲದೇ ಅಪಘಾತವನ್ನು ತಡೆಗಟ್ಟಲು ಮತ್ತು ಪಾದಚಾರಿಗಳಿಗೆ ಆಗುವ ಅಪಘಾತದ ಸಾವು–ನೋವುಗಳನ್ನು ತಡೆಗಟ್ಟಲು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರರವರು ರಸ್ತೆ ವಿಭಜಕಗಳಲ್ಲಿ ರೈಲಿಂಗ್ಸ್‌ಗಳನ್ನು, ಜೀಬ್ರಾ ಕ್ರಾಸಿಂಗ್, ಬ್ಲಿಂಕರ್ಸ್, ರಂಬ್ಲರ್ಸ್‌ಗಳನ್ನು ಅಳವಡಿಸಲು ಕ್ರಮ ಕೈಗೊಳ್ಳಬೇಕಾಗಿರುತ್ತದೆ. |

ಹೆಚ್‌ಡಿ 109 ಎಸ್‌ಎಸ್‌ಟಿ 2025

(ಡಾ: ಜಿ.ಪರಮೇಶ್ವರ)
ಗೃಹ ಸಚಿವರು

# <u>ಅನುಬಂಧ</u>

ಮಂಗಳೂರು ನಗರ ಪೊಲೀಸ್ ವ್ಯಾಪ್ತಿಯಲ್ಲಿ 2022–23, 2023–24 ಮತ್ತು 2024–25 ರಲ್ಲಿ ಉಂಟಾಗಿರುವ ವಾಹನ ಅಪಘಾತ ಪ್ರಕರಣಗಳು ಹಾಗೂ ಮರಣ ಹೊಂದಿದ ಪ್ರಕರಣಗಳ ಸಂಖ್ಯೆ ಹಾಗೂ ಸಂಚಾರಿ ಠಾಣೆಗಳಲ್ಲಿ ದಾಖಲಾಗಿರುವ ಪ್ರಕರಣಗಳು ವಿವರ ಈ ಕೆಳಕಂಡತ್ತಿರುತ್ತವೆ:-

| | ವಿವರ | 2022 | 2023 | 2024 | 2025 (ಫೆಬ್ರವರಿ 2025ರ ವರೆಗೆ) |
|---|---|---|---|---|---|
| ಮಂಗಳೂರು ನಗರ | ಒಟ್ಟು ರಸ್ತೆ ಅಪಘಾತ ಪ್ರಕರಣಗಳು | 927 | 1008 | 1023 | 180 |
| | ಮಾರಣಾಂತಿಕ ಅಪಘಾತ ಪ್ರಕರಣಗಳು | 152 | 160 | 170 | 27 |
| | ಮೃತಪಟ್ಟವರ ಸಂಖ್ಯೆ | 159 | 165 | 175 | 27 |

| ಮಂಗಳೂರು ನಗರ | ವಿವರ | 2022 | 2023 | 2024 | 2025 (ಫೆಬ್ರವರಿ 2025ರ ವರೆಗೆ) |
|---|---|---|---|---|---|
| ಸಂಚಾರ ಪೂರ್ವ | ಮಾರಣಾಂತಿಕ ಅಪಘಾತ ಪ್ರಕರಣಗಳು | 23 | 24 | 27 | 02 |
| ಸಂಚಾರ ಪಶ್ಚಿಮ | | 14 | 12 | 7 | 02 |
| ಸಂಚಾರ ಉತ್ತರ | | 46 | 41 | 50 | 12 |
| ಸಂಚಾರ ದಕ್ಷಿಣ | | 44 | 51 | 65 | 10 |
| **ಒಟ್ಟು** | | **127** | **128** | **149** | **26** |
| ಸಂಚಾರ ಪೂರ್ವ | ಒಟ್ಟು ರಸ್ತೆ ಅಪಘಾತ ಪ್ರಕರಣಗಳು | 180 | 182 | 184 | 31 |
| ಸಂಚಾರ ಪಶ್ಚಿಮ | | 67 | 70 | 57 | 14 |
| ಸಂಚಾರ ಉತ್ತರ | | 253 | 290 | 299 | 65 |
| ಸಂಚಾರ ದಕ್ಷಿಣ | | 259 | 316 | 348 | 47 |
| **ಒಟ್ಟು** | | **759** | **858** | **888** | **157** |
| ಸಂಚಾರ ಪೂರ್ವ | ಮೃತಪಟ್ಟವರ ಸಂಖ್ಯೆ | 23 | 24 | 28 | 02 |
| ಸಂಚಾರ ಪಶ್ಚಿಮ | | 13 | 12 | 07 | 02 |
| ಸಂಚಾರ ಉತ್ತರ | | 48 | 44 | 50 | 12 |
| ಸಂಚಾರ ದಕ್ಷಿಣ | | 48 | 53 | 67 | 10 |
| **ಒಟ್ಟು** | | **132** | **133** | **152** | **26** |